ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ. PW-1

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿನಾಂಕ 01.09.2025

ಪಾಟೀ ಸವಾಲು: ಎದುರುದಾರರ ಪರ ವಕೀಲರಿಂದ:

ಹಿರಿಯರು ನಿಶ್ಚಯಿಸಿದಂತೆ ನಮ್ಮ ವಿವಾಹ ಆಗಿರುತ್ತದೆ ಎಂದರೆ ಸರಿ. ಹಿಂದೂ ಸಂಪ್ರದಾಯದಂತೆ ನಮ್ಮ ಮದುವೆ ಆಗಿರುತ್ತದೆ ಎಂದರೆ ಸರಿ. ಮದುವೆ ಖರ್ಚನ್ನು ನಿಮ್ಮ ಮನೆಯವರು ಅರ್ಧ ಖರ್ಚು ಮಾಡಿದ್ದು ಅದೇ ರೀತಿ ಎದುರುದಾರರ ಮನೆಯವರು ಸಹಾ ಅರ್ಧ ಖರ್ಚನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಮದುವೆಯ ಖರ್ಚನ್ನು ನಮ್ಮ ಮನೆಯವರೇ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವಂತೆ ಮದುವೆ ಸಂದರ್ಭದಲ್ಲಿ ಯಾವುದೇ ಹಣ ಒಡವೆ ಹಾಗೂ ವಸ್ತ್ರಗಳನ್ನು ಉಡುಗೊರೆಯಾಗಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಎದುರುದಾರರು ವಿವಾಹ ವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಸುವವರೆಗೂ ನೀವು ಹಾಗೂ ಅರ್ಜಿದಾರರು ಅನ್ಯೋನ್ಯವಾಗಿ ಚೆನ್ನಾಗಿ ಜೀವನ ನಡೆಸುತ್ತಿದ್ದೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ಜೊತೆಯಲ್ಲಿ ಇದ್ದು ಚೆನ್ನಾಗಿರಲಿಲ್ಲ ಎಂದು ನುಡಿಯುತ್ತಾರೆ. 2 ವರ್ಷಗಳ ಕಾಲ ನಾವು ಚೆನ್ನಾಗಿದ್ದೆವು ಎಂದು ತಿಳಿಸಿರುವ ವಿಚಾರ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ.

ಎದುರುದಾರರಿಗೆ ತಾಯಿ ಇರುವುದಿಲ್ಲ ಎಂದರೆ ಸರಿ. ಅವರಿಗೆ ತಂದೆ ಮಾತ್ರ ಇರುತ್ತಾರೆ ಎಂದರೆ ಸರಿ. ಅವರ ತಂದೆ ನಿಮ್ಮ ಜೊತೆಯಲ್ಲಿಯೇ ವಾಸ ಮಾಡುತ್ತಿದ್ದರು ಎಂದರ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನೀವು ಮನೆಯನ್ನು ಬಿಟ್ಟು ಬರುವ ಸಂದರ್ಭದಲ್ಲಿ ಎದುರುದಾರರ ತಂದೆಗೆ 67 ವರ್ಷ ವಯಸ್ಸಾಗಿತ್ತು ಎನ್ನುವ ಪ್ರಶ್ನೆಗೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ.

ಎದುರುದಾರರು ಕೆಲಸಕ್ಕೆ ಹೋದರೆ ಸಂಜೆ ಮಾತ್ರ ಮನೆಗೆ ಬರುತ್ತಿದ್ದರು ಎನ್ನುವ ಪ್ರಶ್ನೆಗೆ ಸಾಕ್ಷಿಯು ಕೆಲವೊಂದು ಬಾರಿ ಮದ್ಯಾಹ್ನವು ಬರುತ್ತಿದ್ದರು ಎಂದು ನುಡಿಯುತ್ತಾರೆ. ನೀವು ಎದುರುದಾರರಿಗೆ ಹಾಗೂ ಅವರ ತಂದೆಗೆ ಸರಿಯಾದ ರೀತಿಯಲ್ಲಿ ಊಟ ಹಾಗೂ ತಿಂಡಿಯನ್ನು ಬಡಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನೀವು ಎದುರುದಾರರಿಗೆ ಹಾಗೂ ಅವರ ತಂದೆಗೆ ಊಟವನ್ನು ನಿಮ್ಮ ಎಡಗೈನಿಂದ ಬಡಿಸುತ್ತಿದ್ದಿರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ

ಎಂದು ನುಡಿಯುತ್ತಾರೆ. ಎದುರುದಾರರು ಸಂಜೆ ಮನೆಗೆ ಬಂದ ತಕ್ಷಣ ನೀವು ಅವರ ಮೊಬೈಲ್ ಅನ್ನು ಹಾಗೂ ಮೊಬೈಲ್ ನ ಕಾಲ್ ಲಿಸ್ಟ್ ಅನ್ನು ಚೆಕ್ ಮಾಡುತ್ತಿದ್ದೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನೀವು ಮೊಬೈಲ್ ನ ಕಾಲ್ ಲಿಸ್ಟನಲ್ಲಿ ಇರುವ ಮೊಬೈಲ್ ನಂಬರ್ ಗಳನ್ನು ಪಡೆದುಕೊಂಡು ಸದರಿ ನಂಬರ್ ಗಳಿಗೆ ನೀವು ಕರೆ ಮಾಡುತ್ತಿದ್ದಿರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ನಾವು ವಾಸವಿದ್ದ ಮನೆಯ ಮೊದಲನೇ ಮಹಡಿಯಲ್ಲಿ ಎದುರುದಾರರ ಅಣ್ಣ ಮತ್ತು ಅತ್ತಿಗೆ ವಾಸವಾಗಿದ್ದರು ಎಂದರೆ ಸರಿ. ಅವರ ಜೊತೆ ನಾನುದಿನ ನಿತ್ಯ ಜಗಳ ಆಡುತ್ತಿದ್ದೆನು ಎಂದರೆ ಸರಿಯಲ್ಲ. ಮನೆಗೆ ಬರುವ ನೆಂಟರ ಬಳಿ ನಾನು ಸರಿಯಾಗಿ ಮಾತನಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಅವರುಗಳಿಗೆ ಸರಿಯಾದ ಊಟ ಉಪಚಾರ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಎದುರುದಾರರು ಕುಡಿತದ ಚಟಕ್ಕೆ ಬಿದ್ದು ನನಗೆ ಹಿಂಸೆ ನೀಡುತ್ತಿದ್ದರು ಎಂದು ತಿಳಿಸಿರುವ ವಿಚಾರ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ನೀವು ಮತ್ತು ಎದುರುದಾರರು ಹಿಂದೂ ದರ್ಮಕ್ಕೆ ಸೇರಿದವರು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನೀವು ಮದುವೆಗಿಂತ ಮುಂಚೆ ಕ್ರಿಶ್ಚಿಯನ್ ದೇವಾಲಯಗಳಿಗೆ ಹೋಗುತ್ತಿದ್ದಿರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಾನು ಮದುವೆಗಿಂತ ಮುಂಚೆ ಕ್ರಿಶ್ಚಿಯನ್ ದೇವಾಲಯಗಳಿಗೆ ಹೋಗುತ್ತಿದ್ದು ಆ ರೀತಿ ಹೋಗುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮದುವೆಯಾದ ನಂತರ ನಾನು ಎದುರುದಾರರಿಗೆ ಕ್ರಿಶ್ಚಿಯನ್ ದೇವಾಲಯಗಳಿಗೆ ಹೋಗಲುಹಿಂಸೆ ನೀಡುತ್ತಿದ್ದೆನು ಎಂದರೆ ಸರಿಯಲ್ಲ. ನಾನು ಎದುರುದಾರರ ಸಮ್ಮತಿ ಇಲ್ಲದೆ ಸುಮಾರು ಸಾರಿ ಕ್ರಿಶ್ಚಿಯನ್ ದೇವಾಲಯಗಳಿಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಎದುರುದಾರರಿಗೆ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳ್ಳುವಂತೆ ಹಿಂಸೆ ನೀಡುತ್ತಿದ್ದೆನು ಎಂದರೆ ಸರಿಯಲ್ಲ.

ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಎದುರುದಾರರಿಗೆ ಹೆದರಿಸುತ್ತಿದ್ದೆನು ಎಂದರೆ ಸರಿಯಲ್ಲ. ನಾನು ಹಿಂದೂ ಸಂಪ್ರದಾಯದ ಹಬ್ಬ ಹರಿದಿನಗಳನ್ನು ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಹಬ್ಬದ ಸಂದರ್ಬದಲ್ಲಿ ಎದುರುದಾರರ ಜೊತೆ ನಾನು ಜಗಳ ಆಡುತ್ತಿದ್ದೆನು ಎಂದರೆ ಸರಿಯಲ್ಲ. ಎದುರುದಾರರ ಸಮ್ಮತಿ ಪಡೆದುಕೊಳ್ಳದೆಯೇ ನಾನು ಆಗಾಗ್ಗೆ ನನ್ನ ತವರು ಮನೆಗೆ ಹೋಗುತ್ತಿದ್ದೆನು ಎಂದರೆ ಸರಿಯಲ್ಲ. ಎದುರುದಾರರು ಮನೆಯಲ್ಲಿ ಮಲಗಿರಬೇಕಾದರೆ ನಾನು ಹೊರಗಡೆ ಬಂದು ಗಂಟೆಗಟ್ಟಲೆ ಫೋನಿನಲ್ಲಿ ಮಾತನಾಡುತ್ತಿದ್ದೆನು ಎಂದರೆ ಸರಿಯಲ್ಲ.

ಚಂದ್ರು ಹಾಗೂ ಸುಂದರ್ ರವರು ನಿಮಗೆ ಗೊತ್ತಿರುತ್ತಾರೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಚಂದ್ರು ಹಾಗೂ ಸುಂದರ್ ರವರುಗಳ ಜೊತೆ ನಾನು ಶಾಪಿಂಗ್ ಗೆ ಹೋಗುತ್ತಿದ್ದೆನು ಎಂದರೆ ಸರಿಯಲ್ಲ. ಚಂದ್ರು ಹಾಗೂ ಸುಂದರ್ ರವರುಗಳ ಜೊತೆ ನಾನು ಗಂಟೆಗಟ್ಟಲೆ ಮಾತನಾಡುತ್ತಿದ್ದೆನು ಎಂದರೆ ಸರಿಯಲ್ಲ.

ಎದುರುದಾರರ ಅಣ್ಣನ ಹೆಂಡತಿಯ ತಂಗಿಯ ಹೆಸರು ಸೌಮ್ಯ ಇರುತ್ತದ ಎಂದರೆ ಸರಿ. ಎದುರುದಾರರಿಗೆ ಸೌಮ್ಯರವರ ಜೊತೆ ಸಂಬಂಧ ಇರುವ ಬಗ್ಗೆ ನೀವು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ದಾಖಲೆ ಯಾವುದು ಇರುವುದಿಲ್ಲ ನಾನು ಕಣ್ಣಾರೆ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಆ ರೀತಿ ನಾನು ಏನನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಸೌಮ್ಯ ಅವರ ಮನೆಯವರ ಜೊತೆ ಜಗಳ ಮಾಡಿರುವ ಕಾರಣ ಅವರ ಜೀವನ ಹಾಳಾಗಿರುತ್ತದೆ ಎಂದರೆ ಸರಿಯಲ್ಲ. ನಾವು ಹೆಚ್ಚುವರಿಯಾಗಿ ರೂ.50,000/- ಹಣವನ್ನು ವರದಕ್ಷಿಣೆಯಾಗಿ ಎದುರುದಾರರಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ಎದುರುದಾರರು ಒಟ್ಟಿಗೆ ವಾಸವಿದ್ದಾಗ ಎದುರುದಾರರು ನಮ್ಮ ಸಂಸಾರಕ್ಕೆಂದು ತಿಂಗಳಿಗೆ ರೂ.20,000/- ಗಳನ್ನು ಖರ್ಚು ಮಾಡುತ್ತಿದ್ದರು ಎಂದರೆ ಸರಿಯಲ್ಲ.

ವಿವಾಹ ವಿಚ್ಛೇದನದ ಪ್ರಕರಣದಲ್ಲಿ ಎದುರುದಾರರು ನಿಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದು ಹೇಳಿ ಬರೆಸಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಜೊತೆಯಲ್ಲಿ ಇದ್ದೆವು ಎಂದು ಹೇಳಿ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ.

ಮನೆಯ ಅಗತ್ಯ ಬಳಕೆಗೆ ಬೇಕಾಗುವ washing machine, refrigerator ಗಳನ್ನು ಎದುರುದಾರರು ನನಗೋಸ್ಕರ ಖರೀದಿ ಮಾಡಿದ್ದರು ಎನ್ನುವ ಪ್ರಶ್ನೆಗೆ ಸಾಕ್ಷಿಯು ಅವುಗಳನ್ನು ನನ್ನ ತಂದೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ವಿವಾಹ ವಿಚ್ಛೇದನದ ಪ್ರಕರಣದಲ್ಲಿ ಎದುರುದಾರರು washing machine, refrigerator ಗಳನ್ನು ಕೊಡಿಸಿರುತ್ತಾರೆ ಎಂದು ನಾನು ಹೇಳಿರುತ್ತೇನೆ ಎಂದರೆ ಸರಿ.

ಶಿವಕುಮಾರ್ ಮತ್ತು ಮಾಣಿಕ್ಯರವರು ನನ್ನ ಅಣ್ಣಂದಿರು ಎಂದರೆ ಸರಿ. ಶಿವಕುಮಾರ್ ಮತ್ತು ಮಾಣಿಕ್ಯರವರು ಉದ್ದೇಶಪೂರ್ವಕವಾಗಿ ಎದುರುದಾರರ ವಿರುದ್ಧ ನನ್ನ ಚಿತಾವಣೆ ಮೇರೆಗೆ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿಸಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.ೄ ಎದುರುದಾರರ ಜೊತೆ ನನಗೆ ಜೀವನ ಮಾಡಲು ಇಷ್ಟ ಇಲ್ಲದ ಕಾರಣ ನಾನು ಶಿವಕುಮಾರ್ ಮತ್ತು ಮಾಣಿಕ್ಯರವರಿಗೆ ಕುಮ್ಮಕ್ಕು ನೀಡಿ ಪೊಲೀಸ್ ಠಾಣೆಯಲ್ಲಿ ದೂರನ್ನು ಕೊಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮಹಿಳಾ ಪೊಲೀಸ್ ಠಾಣೆಯಲ್ಲಿ ಎದುರುದಾರರ ವಿರುದ್ಧ ದೂರನ್ನು ನೀಡಿರುತ್ತೇನೆ ಎಂದರೆ ಸರಿ. ಎದುರುದಾರರು ಯಾವುದೇ ಗಲಾಟೆ ಮಾಡದೆ ಇದ್ದರೂ ಸಹಾ ನಾನು ಅವರ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಎದುರುದಾರರಿಗೆ ವಿಚ್ಛೇದನ ನೀಡಬೇಕು ಎಂದು ಕಿರುಕುಳ ನೀಡುತ್ತಿದ್ದೆನು ಎಂದರೆ ಸರಿಯಲ್ಲ.

ನಿಪಿ.4 ಪಂಚನಾಮೆಯಲ್ಲಿ ನನ್ನ ಮತ್ತು ಎದುರುದಾರರ ಸಹಿ ಇರುವುದಿಲ್ಲ ಎಂದರೆ ಸಾಕ್ಷಿಯು ಎದುರುದಾರರು ಸ್ಥಳದಲ್ಲಿ ಇದ್ದು ಸಹಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ.4 ದಾಖಲೆಯನ್ನು ನಮ್ಮ ಅನುಕೂಲಕ್ಕೆ ತಕ್ಕಂತೆ ಪಂಚಾಯಿತಿ ಸಭೆಯಲ್ಲಿ ಬರೆಯಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಎದುರುದಾರರು ನನ್ನನ್ನು ಚೆನ್ನಾಗಿ ನೋಡಿಕೊಂಡರು ಸಹಾ ನನಗೆ ಅವರ ಜೊತೆ ಜೀವನ ಮಾಡಲು ಇಷ್ಟ ಇಲ್ಲದ ಕಾರಣ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಹಲವಾರು ಬಾರಿ ಎದುರುದಾರರು ಫೋನಿನ ಮೂಲಕ ಹಾಗೂ ಮುಖಾಮುಖಿಯಾಗಿ ಜೀವನ ಮಾಡುವಂತೆ ನನ್ನನ್ನು ಬಂದು ಕರೆದರೂ ಸಹಾ ನಾನು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಆದ ಕಾರಣ ಎದುರುದಾರರು ಮೈಸೂರಿನ ಕೌಟುಂಬಿಕ ನ್ಯಾಯಾಲಯದಲ್ಲಿ ವಿವಾಹ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದರು ಎನ್ನುವ ಪ್ರಶ್ನೆಗೆ ಸಾಕ್ಷಿಯು ಅವರು ನನ್ನನ್ನು ಕರೆದಿರುವುದಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ವಿವಾಹ ವಿಚ್ಛೇದನಕ್ಕೆ ಆದೇಶ ಆಗಿರುತ್ತದೆ ಎಂದರೆ ಸರಿ. ಸದರಿ ಆದೇಶದ ವಿರುದ್ಧ ನಾನು ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ. ಅದಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ.

ನನ್ನ ಗಂಡನ ಜೊತೆ ಜೀವನ ಮಾಡಲು ಇಷ್ಟವಿಲ್ಲದ ಕಾರಣ ನಾನು ಯಾವುದೇ ಅಪೀಲನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಆ ರೀತಿ ನನ್ನ ಗಂಡನ ಜೊತೆ ಜೀವನ ಮಾಡಲು ಇಷ್ಟ ಇದಿದ್ದರೆ ನಾನು ಅಪೀಲನ್ನು ಸಲ್ಲಿಸುತ್ತಿದ್ದೆನು ಎಂದರೆ ಸರಿಯಲ್ಲ.

ಎದುರುದಾರರು ಜೆ.ಪಿ. ನಗರ ಮೈಸೂರಿನಲ್ಲಿ ಟಿ.ವಿ. ಷೋರೂಂ ನಲ್ಲಿ ಸೇಲ್ಸ್ ಮ್ಯಾನೇಜರ್ ಆಗಿ ತಿಂಗಳಿಗೆ ರೂ.30,000/- ಸಂಪಾದನೆ ಮಾಡುತ್ತಿದ್ದ ಬಗ್ಗೆ ನಾನು ದಾಖಲೆಗಳನ್ನು  ನೀಡಿರುವುದಿಲ್ಲ. ಅರ್ಜಿದಾರರು ಬಡ್ಡಿ ವ್ಯವಹಾರ ಮಾಡುತ್ತಿರುವ ವಿಚಾರ ಕಟ್ಟುಕತೆಯಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ.

ನಾನು ಪಿ.ಯು.ಸಿ. ವರೆಗೆ ಓದಿರುತ್ತೇನೆ. ನಿಮ್ಮ assets and liabilities statement ನಲ್ಲಿ ವಿದ್ಯಾರ್ಹತೆ ಬಿ.ಬಿ.ಎಂ ಎಂದು ಬರೆದಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾನು ಬಿ.ಬಿ.ಎಂ. ಅನ್ನು ಕಂಪ್ಲೀಟ್ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

ನೀವು ಪಧವಿದರರಾಗಿದ್ದು ಒಂದು ಪ್ರತಿಷ್ಟಿತ ಕಂಪನಿಯಲ್ಲಿ 30 ರಿಂದ 40 ಸಾವಿರ ರೂ.ಗಳನ್ನು ತಿಂಗಳಿಗೆ ಸಂಪಾದನೆ ಮಾಡುತ್ತಿದ್ದೀರಾ ಎಂದರೆ ಸರಿಯಲ್ಲ.  ನನ್ನ ತವರು ಮನೆಗೆ ಸೇರದ ಜಮೀನು ಇದ್ದು ಅದರಲ್ಲಿ ವಾರ್ಷಿಕವಾಗಿ 5 ರಿಂದ 6 ಲಕ್ಷ ರೂ. ಆದಾಯ ಬರುತ್ತಿದ್ದು ಸದರಿ ಹಣದಿಂದಲೂ ನಾನು ಜೀವನ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಆದ ಕಾರಣ 2 ಮತ್ತು 3 ನೇ ಅರ್ಜಿದಾರರನ್ನು ನೋಡಿಕೊಳ್ಳಲು ನನಗೆ ಯಾವುದೇ ಸಮಸ್ಯೆ ಇರುವುದಿಲ್ಲ ಎಂದರೆ ಸರಿಯಲ್ಲ.

ಎದುರುದಾರರು ಹೊಟೇಲ್ ನಲ್ಲಿ ಕೆಲಸ ಮಾಡುತ್ತಿದ್ದು ಅವರಿಗೆ ದಿನಕ್ಕೆ ರೂ.200 ರಿಂದ 300 ದಿನಗೂಲಿ ಆದಾಯ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಮಾವನ ಹೆಸರು ಪಳನಿ.ಆರ್. ಇರುತ್ತದೆ. ನಿಪಿ.12 ರಲ್ಲಿ ಕಾಣುವ ಅಂಗಡಿಯು ಪಳನಿಯವರಿಗೆ ಸೇರಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅದನ್ನು ಎದುರುದಾರರೇ ನೋಡಿಕೊಳ್ಳುತ್ತಿದ್ದಾರೆ ಎಂದು ನುಡಿಯುತ್ತಾರೆ. ಎದುರುದಾರರ ಅಣ್ಣ ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.12 ರಲ್ಲಿ ಇರುವ ಅಂಗಡಿಯನ್ನು ಎದುರುದಾರರ ಅಣ್ಣ ಮತ್ತು ತಂದೆಯವರು ಮಾತ್ರ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ.

ಎದುರುದಾರರಿಗೆ ತೊಂದರೆ ಕೊಡುವ ಸಲುವಾಗಿ ನಾನು ಈ ಪ್ರಕರಣವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರು ನನಗೆ ಯಾವುದೇ ಜೀವನಾಂಶ ನೀಡಲು ಅರ್ಹರಲ್ಲ ಎಂದರೆ ಸರಿಯಲ್ಲ. ನಿಮಗೆ ಎದುರುದಾರರ ಜೊತೆ ಜೀವನ ಮಾಡಲು ಇಷ್ಟ ಇಲ್ಲದ ಕಾರಣ ನೀವು ಯಾವುದೇ ಜೀವನಾಂಶಕ್ಕೆ ಅರ್ಹರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಸಾ.ಓ.ಹೇ.ಸ.ಒ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ., ಶ್ರೀರಂಗಪಟ್ಟಣ.**